International Journal of Kannada Research
www.kannadajournal.com

ISSN: 2454–5813
IJKR 2022; 8(2): 81-84
© 2022 IJKR
www.kannadajournal.com
Received: 10-02-2022
Accepted: 18-03-2022

**ತಿಪ್ಪೇಸ್ವಾಮಿ. ಎ**
ಸಂಶೋಧಕರು, ಕನ್ನಡ ಭಾರತಿ ವಿಭಾಗ, ಕುವೆಂಪು ವಿಶ್ವವಿದ್ಯಾಲಯ. ಮಾರ್ಗದರ್ಶಿಗಳು, ಕರ್ನಾಟಕ, ಭಾರತ

**ಡಾ.ನೆಲ್ಲಿಕಟ್ಟೆ ಎಸ್.ಸಿದ್ದೇಶ್**
ಅಸೋಸಿಯೇಟ್ ಪ್ರೊಫೆಸರ್, ಕನ್ನಡ ಭಾರತಿ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಕರ್ನಾಟಕ, ಭಾರತ

Corresponding Author:
**ತಿಪ್ಪೇಸ್ವಾಮಿ. ಎ**
ಸಂಶೋಧಕರು, ಕನ್ನಡ ಭಾರತಿ ವಿಭಾಗ, ಕುವೆಂಪು ವಿಶ್ವವಿದ್ಯಾಲಯ. ಮಾರ್ಗದರ್ಶಿಗಳು, ಕರ್ನಾಟಕ, ಭಾರತ

# ಶರಣರಲ್ಲಿ ಭಕ್ತಿಯ ಸ್ವರೂಪ

**ತಿಪ್ಪೇಸ್ವಾಮಿ. ಎ, ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್**

**ಸಾರಾಂಶ:**
ಕನ್ನಡ ಸಾಹಿತ್ಯವು ಅದರದೇ ಆದ ಅಸ್ತಿತ್ವವನ್ನು ಹೊಂದಿದ್ದು ಶತಶತಮಾನಗಳಿಂದಲೂ ಹಲವಾರು ಸಾಹಿತ್ಯಕಾರರು ತಮ್ಮ ಸಾಹಿತ್ಯದಿಂದ ಸಮಾಜವನ್ನು ಉತ್ತಮ ದಾರಿಗೆ ಕರೆದುಕೊಂಡು ಹೋಗಲು ಪ್ರಯತ್ನಸಿದ್ದಾರೆ. ಅಂತಹುದರಲ್ಲಿ 12 ಶತಮಾನದ ವಚನ ಸಾಹಿತ್ಯವು ಒಂದಾಗಿದೆ. ವಚನಕಾರರು ಸಮಾಜದಲ್ಲಿರುವ ಮೂಢನಂಬಿಕೆಗಳು, ಅನಿಷ್ಟ ಪದ್ಧತಿಗಳ ವಿರುದ್ಧ ವಚನಗಳ ಮೂಲಕ ಜಾಗೃತಿಯನ್ನು ಮೂಢಿಸಿ, ಭಕ್ತಿಯ ಮಹತ್ವವನ್ನು, ಸ್ವರೂಪವನ್ನು, ವಿಮರ್ಶಾತ್ಮಕ ಚಿಂತನೆಗಳೊಂದಿಗೆ ಸಮಾಜಕ್ಕೆ ಸಾರಿದ್ದಾರೆ. ಈ ಲೇಖನವು ವಚನಕಾರರ ಆದರ್ಶಮಯವಾದ ವಚನಗಳನ್ನು ಸಾದರ ಪಡಿಸುತ್ತಾ, ಅದರ ಆಳ ಮತ್ತು ಚಿಂತನೆಗಳ ವಿಸ್ತಾರವನ್ನು ಪ್ರಸ್ತುತ ಪಡಿಸಿದೆ.

**ಕೀವರ್ಡ್ಗಳು**: ಸ್ವಂತ ಅಸ್ತಿತ್ವ, ಸಾಹಿತ್ಯದ ಸಂಖ್ಯೆ, ಒಳ್ಳೆಯದಕ್ಕಾಗಿ ಸಮಾಜ, ಮೌಖಿಕ ಸಾಹಿತ್ಯ

**ಪೀಠಿಕೆ:**
ಒಮ್ಮೆ ನನ್ನ ಹುಟ್ಟಿದ ಊರಿಗೆ ಹೋಗಿದ್ದೆ ನನ್ನ ಎದುರಿಗೆ ನನ್ನ ಬಾಲ್ಯದ ಗೆಳೆಯ 'ಮಾರಪ್ಪ' ಸಿಕ್ಕ. ಏನ್ ಮಾರಪ್ಪ ಚೆನ್ನಾಗಿದೇಯ? ಟಗರನ್ನು ಚೆನ್ನಾಗಿಯೇ ಸಾಕಿದ್ದೇಯಾ? ಕೊಡುತ್ತೀಯಾ ಕೊಯ್ಕಂಡ ತಿನ್ನಬೇಕು ಅಂದೆ; ಅದಕ್ಕೆ ಅವನು ಇಲ್ಲ ಸಾರ್ ಇದು ನಮ್ಮ 'ಚೌಡಮ್ಮ' ನಿಗೆ ಬಿಟ್ಟಿದೇನೆ ಮುಂದಿನ ತಿಂಗಳು ಜಾತ್ರೆ, ಆಗ 'ಚೌಡಮ್ಮನಿಗೆ' ಬಲಿ ಕೊಡಬೇಕು ಅಂದ ಅದಕ್ಕೆ ನಾನು ಬೇಜಾರ ಆಗಬೇಡ ಸುಮ್ಮೆ ಹಾಗೇ ಕೇಳಿದೆ ಅಂದೆ. ಇಂತಹ ವಿಷಯಗಳು ಹಳ್ಳಿಲಿ ಹುಟ್ಟಿದ ನನಗೆ ಹೊಸದೇನಲ್ಲ. ಈ ಸಂಗತಿ ಹೇಳಲು ಕಾರಣ ಕನ್ನಡ ಸಾಹಿತ್ಯದಲ್ಲಿ ಶರಣರ ಭಕ್ತಿಯ ಸ್ವರೂಪವನ್ನು ಅಧ್ಯಯನ ಮಾಡಲು ಹೊರಟ ನನಗೆ ಆಶ್ಚರ್ಯವಾಗಿತ್ತು.

ಕನ್ನಡ ಸಾಹಿತ್ಯದ ದಾಖಲೆಗೊಂಡ ಇತಿಹಾಸದಲ್ಲಿ ಅತ್ಯಂತ ಹೆಚ್ಚು. ಸಂಗ್ರಹವಾದ ಮತ್ತು ವಿಸ್ತಾರವಾದ ಅಧ್ಯಯನಕ್ಕೆ ಭೂಮಿಕೆಯನ್ನು ಒದಗಿಸಿದ ಸಾಹಿತ್ಯ ಶರಣರ/ವಚನ ಸಾಹಿತ್ಯ. ಭಕ್ತಿ ಚಳುವಳಿಯ ಪ್ರಭಾವ; ಧರ್ಮಗಳ ಅಸ್ತಿತ್ವಕ್ಕಾಗಿ ನಡೆಯುತ್ತಿದ್ದ ಶೀತಲ ಸಮರದ ಸಂದರ್ಭದಲ್ಲಿ ವಚನ ಸಾಹಿತ್ಯ ಸಾಮಾನ್ಯರನ್ನು ತಲುಪುವ ಪ್ರಯತ್ನ ಮಾಡಿತು. ಮನುಷ್ಯನ ಜೀವನವನ್ನು ಹಸನು ಮಾಡಲು ಶ್ರಮಿಸಿತು. ಭೂತ–ವರ್ತ–ಭವಿಷ್ಯತ್ ಕಾಲಗಳಲ್ಲೂ ಚರ್ಚೆಗೆ ಒಳಗಾಗಿರುವ ಭಕ್ತಿ–ಭಕ್ತ, ದಯೆ, ಧರ್ಮ, ಆರಾಧನೆ, ಸ್ವರ್ಗ–ನರಕ, ವಿಚಾರಗಳನ್ನು ವಿಶ್ಲೇಷಣೆಗೆ ಒಳಪಡಿಸಿತು. ಸಾಮಾಜಿಕ, ಧಾರ್ಮಿಕ, ಆರ್ಥಿಕ ವಿಚಾರಗಳಿಗೆ ತಾತ್ವಿಕ ನೆಲೆಗಳನ್ನು ಶೋಧಿಸಿತು, ಇಲ್ಲಿ ಮುಖ್ಯವಾಗಿ ಶರಣರಲ್ಲಿ ಭಕ್ತಿಯ ಸ್ವರೂಪ ಬಗ್ಗೆ ಚರ್ಚಿಸೋಣ ಶರಣ ಎಂದರೆ ಯಾರು? ಶರಣನ ಲಕ್ಷಣಗಳೇನು? ಭಕ್ತಿ ಎಂದರೇನು? ಭಕ್ತಿಯ ಸ್ವರೂಪವೇನು? ಎಂಬುದನ್ನು ನನ್ನ ಓದಿನ ವ್ಯಾಪ್ತಿಯೊಳಗೆ ಹೇಳಿದ್ದೇನೆ.

ಶರಣು ಎಂದವರಿಗೆ ಮರಣವಿಲ್ಲ ಎಂಬ ಮಾತಿದೆ ಶರಣು ಎಂದರೆ ಭಾಗವುದು, ನಮಸ್ಕರಿಸುವುದು ವಿಧೇಯತೆ ತೋರು ಎಂಬರ್ಥಗಳಿವೆ. ಬಹುಶಃ ಈ ಅರ್ಥದಲ್ಲಿ 'ಶರಣ' ಪದವನ್ನು ವಿಶ್ಲೇಷಿಸುವುದಾದರೆ ದೇವರಿಗೆ ಭಾಗುವುದು, ನಮಸ್ಕರಿಸುವುದು, ವಿಧೇಯನಾಗಿರುವುದು/ಆರಾಧಿಸುವುದು ಎಂದಾಗುತ್ತದೆ. ಭಾರತೀಯ ಪರಂಪರೆಯಲ್ಲಿ 'ಸ್ವಾಮೀಜಿ, ಸಂನ್ಯಾಸಿಗಳಿಗೆ ವಿಶೇಷ ಗೌರವ/ಮಹತ್ವವಿದೆ ಅದಕ್ಕೂ ಮಿಗಿಲಾದವನು ಶರಣ ಎಂಬ ಮಾತಿದೆ. ಸಾವಿರಕ್ಕೊಬ್ಬ ಸಂನ್ಯಾಸಿ ಕೋಟಿಗೊಬ್ಬ ಶರಣ ಈ ಮಾತು ಶರಣರ ನಡೆ–ನುಡಿಯ ಪಾವಿತ್ರ್ಯತೆಯನ್ನು ಹೆಚ್ಚಿಸಿದೆ.

ಆದ್ಯ ವಚನಕಾರ ಜೇಡರ ದಾಸಿಮಯ್ಯನ ಒಂದು ವಚನ "ಬರಸಟೆಗನ ಭಕ್ತಿ ದಿಟವೆಂದು ನಚ್ಚಲುಬೇಡ ಮರಕೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತು ಕಾಣಾ ರಾಮನಾಥ," ದೇವಾಲಯದಿಂದ ದೇಹಕ್ಕೆ ದೇವರನ್ನು ವರ್ಗಾಯಿಸಿದ್ದು, ಶರಣರು ಅದರಲ್ಲಿ ಬಸವಣ್ಣನವರು ದೇಹವೆ ದೇಗುಲ ಎಂದು ತಿಳಿಸಿದ್ದು ಹೆಚ್ಚು ಕ್ರಾಂತ್ರಿಯನ್ನುಂಟುಮಾಡಿತು. ಇದರಂತೆಯೇ ನಿಜವಾದ ಭಕ್ತಿಯ ಕುರಿತು ಆಯ್ದಕ್ಕಿ ಲಕ್ಕಮ್ಮ ಈ ಕೆಳಗಿನ ತಮ್ಮ ವಚನದಲ್ಲಿ ತಿಳಿಸಿದ್ದಾರೆ.

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು,  
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ,  
ಧೃಡವಿಲ್ಲದ ಭಕ್ತಿ ಅಡಿ ಒಡೆದ ಕುಂಬದಲ್ಲಿ ಸುಜಲವ ತುಂಬಿದಂತೆ  
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವ ಮುಟ್ಟದ ಭಕ್ತಿ

ಶರಣರು ತಾವು ಕಾಯಕ ಮಾಡಿ ಬಂದ ಹಣದಲ್ಲಿ ಸಂಪತ್ತಿನಲ್ಲಿ ನಮಗೆ ಅಗತ್ಯವಿರುವಷ್ಟು ಮಾತ್ರ ಇಟ್ಟು ಕೊಂಡು ಉಳಿದದ್ದೆಲ್ಲಾ ದಾನ ಮಾಡಬೇಕೆಂಬ ನಿಯಮ ಭಕ್ತಿಯೆಂಬ ಅನುಭವವು ವ್ಯಕ್ತಿಗತವಾದದ್ದರಿಂದ ಆರಾಧನೆಯನ್ನು ವ್ಯಕ್ತಿ ಸೀಮಿತಗೊಳಿಸಿಕೊಂಡಾಗ ತನ್ನ ಭಕ್ತಿಯನ್ನು ಹಣಕೊಟ್ಟು ಇತರರಿಂದ ಅಭಿವ್ಯಕ್ತಿ ಪಡಿಸುವ ಪೂಜಾರಿ ಪದ್ಧತಿಯನ್ನು ಶರಣರು ಖಂಡಿಸಿದರು, ಶೋಷಣೆ ಮಾಡುವ, ಬೇಡಿಕೆಯಿಡುವ ದೇವರು ದೇವಾಲಯಗಳನ್ನು ದೂರವಿಟ್ಟರು ದೇಹವೇ ದೇಗುಲ ಎಂದು ಮನುಷ್ಯನಿಗೆ ದೈವದ ರೂಪು ನೀಡಿದರು. ವ್ಯಕ್ತಿ–ಪ್ರಕೃತಿಗಳ ನಡುವಣ ಸಂಬಂಧದ ಚಿಂತನಶೀಲತೆ, ಜೀವನ ತೃಪ್ತಿ, ಔದಾರ್ಯ, ಸ್ವಾಭಿಮಾನ, ಮಿತಿಯಾಸೆ, ಆದರ್ಶ ಮನೋಭಾವಗಳು ಶರಣರಲ್ಲಿ ಸಮ್ಮಿಳಿತವಾಗಿದ್ದವರು. ಜೀವ ವಿರೋಧಿಯಾದ ಸಂಪ್ರದಾಯ ನಿಷ್ಠೆ ಡಾಂಬಿಕ ಆಚರಣೆಗಳನ್ನು ತಿರಸ್ಕರಿಸಿದರು. ವ್ಯಸನಕ್ಕೆಳಸುವ ಹೆಣ್ಣು–ಮಣ್ಣು–ಹೊನ್ನುಗಳು, ಆದರ್ಶ ಜೀವನ ಕ್ರಮಕ್ಕೆ ಅಡ್ಡಿಯಾಗದಂತೆ ಜಾಗ್ರತೆವಹಿಸಿ ಬಳಸಿದರು. ಬೋಗಿಸಲ್ಪಡುವ ಪಂಚೇಂದ್ರಿಯಗಳನ್ನು ಹತೋಟಿಯಲ್ಲಿಡಬೇಕು, ಇವು ಭಕ್ತಿಗೆ ಸಂಬಂಧಿಸಿದವುಗಳು ಇವು ಭಕ್ತನಿಂದ ದೂರ ಉಳಿಯಬೇಕೆಂಬುದು ಶಿವಶರಣರ ಸ್ವಷ್ಟ ನಿಲುವಾಗಿತ್ತು. ಇಂದು ಗಲ್ಲಿ–ಗಲ್ಲಿಗಳಲ್ಲಿ ಅರಕ್ಷಕರ ಠಾಣೆಗಳು ಸ್ಥಾಪಿತವಾಗಿ, ಕಳ್ಳರನ್ನು ಹತೋಟಿಗೆ ತರಲು ಹರ–ಸಾಹಸ ಪಡಬೇಕಾಗಿದೆ. ಅಂಬಿಗರ ಚೌಡಯ್ಯರು ಅಂಗ ಮತ್ತು ಲಿಂಗವ ಕುರಿತು ಈ ಕೆಳಗಿನ ವಚನದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಅಂಗವ ಅಂದ ಮಾಡಿಕೊಂಡು ತಿರುಗುವ  
ಭಂಗ ಗೇಡಿಗಳು ನೀವು ಕೇಳಿರೋ  
ಅಂಗಕ್ಕೆ ಅಂದವಾವುದೆಂದರೆ  
ಗುರುವಿಗೆ ತನುವ ಕೊಟ್ಟಿರುವುದೇ ಅಂದ  
ಲಿಂಗಕ್ಕೆ ಮನವ ಕೊಟ್ಟಿರುವುದೇ ಅಂದ  
ಜಂಗಮಕ್ಕೆ ಧನವ ಕೊಟ್ಟಿರುವುದೇ ಅಂದ.

ಅಂಬಿಗರ ಚೌಡಯ್ಯನ ಈ ವಚನ ಆಧುನೀಕತೆಯ ಬದುಕಿನಲ್ಲಿ ನಮ್ಮ ಜೀವನ ಶೈಲಿಯನ್ನು ಜಾಗತೀಕರಣದ ಭರಾಟೆಯಲ್ಲಿ ಸಾರ್ವತ್ರಿಕ ಮೌಲ್ಯಗಳನ್ನು ನಾಶಮಾಡುತ್ತಿರುವವರಿಗೆ, ಛಾಟಿ ಬೀಸಿದೆ. ಅಲ್ಪ ಸುಖದ ಆಸೆಗಳಿಗೆ ಬಲಿಯಾಗಿ, ಸ್ವಾರ್ಥಪರ ಚಿಂತನೆಗಳಿಂದ ಹಗಲು ವೇಷಗಳನ್ನು ಧರಿಸಿಕೊಂಡು ವಂಚಿಸುತ್ತಿರುವ ಸಾಧು–ಸಂನ್ಯಾಸಿಗಳಿಗೆ ನೇರವಾಗಿ ಪ್ರಶ್ನಿಸಿದ್ದಾನೆ. ಸುಳ್ಳು, ಮೋಸ, ವಂಚನೆಗಳಿಂದ ಜೀವನ ಸಾಗಿಸುವ ಇಂತಹ ಜನರನ್ನು ಭಂಗಗೇಡಿಗಳೆಂದು ಚುಚ್ಚಿದ್ದಾನೆ. ಗುರು–ಲಿಂಗ–ಜಂಗಮಕ್ಕೆ ತನು–ಮನ–ದನವ ನೀಡುವುದೇ ಜೀವನದ ಪರಮಾನಂದ, ಈ ಆನಂದವು ಜೀವನಕ್ಕೆ ಆಭರಣವಿದ್ದಂತೆ ಸುಖ–ಭೋಗದ ಅಂದ ಶಾಶ್ವತವಲ್ಲ ಎಂದು ತಿಳಿಸಿದ್ದಾನೆ. ಬಸವಣ್ಣನವರು ಕಾಗೆಯ ಉದಾಹರಣೆಯೊಂದಿಗೆ ಈ ಕೆಳಗಿನ ವಚನದಲ್ಲಿ ಮೂಢನಂಬಿಕೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ.

ಕಾಗೆ ಕೂತು ಹೊಲಸುಮಾಡುವ ದೇವಸ್ಥಾನದ  
ಕಳಸವಾಗುವ ಬದಲು ಶರಣರು ಮೆಟ್ಟುವ  
ಚಮ್ಮಾವುಗೆಯ ಮಾಡು ಕೂಡಲ ಸಂಗಮದೇವ

ಮೂಢನಂಬಿಕೆಯನ್ನು ತ್ರೀವವಾಗಿ ಖಂಡಿಸುವ ಬಸವಣ್ಣನವರ ಈ ವಚನ ಡಾ.ಬಿ.ಆರ್. ಅಂಬೇಡ್ಕರ್ ಹೇಳುವಂತೆ ದೇವಸ್ಥಾನದಲ್ಲಿ ಬಾರಿಸುವ ಘಂಟೆಗಳಿಗಿಂತ ಶಾಲೆಗಳಲ್ಲಿ ಬಾರಿಸುವ ಘಂಟೆಗೆ ಹೆಚ್ಚಿನ ಮಹತ್ವ ನೀಡಿರುವುದನ್ನು ಗಮನಿಸಬಹುದು. ದೇವಸ್ಥಾನ ಮೂಢನಂಬಿಕೆಯ ಗೂಡಾದರೆ ಶಾಲೆ ಜ್ಞಾನಾರ್ಜನೆಯ ಸಂಕೇತವಾಗಿದೆ. ವಚನಕಾರರ ಚಳುವಳಿಯ ಉದ್ದೇಶಗಳಿಗೂ ಪ್ರಸ್ತುತ ಸಂವಿಧಾನದ ಉದ್ದೇಶಗಳಿಗೂ ಅಂತಹ ಭಿನ್ನತೆಗಳೇನೂ ನನಗೆ ಕಾಣಿಸುವುದಿಲ್ಲ. ಕಾರಣ ಆಗಿನ ಕಾಲದಲ್ಲಿದ್ದ ಜಾತಿ ಪದ್ಧತಿ, ಸ್ತ್ರಿ ಶೋಃಷಣೆ, ಪುರೋಹಿತಶಾಹಿ. ಯುಜಾಮಾನ್ಯ ಸಂಸ್ಕೃತಿ ಮೂಢನಂಬಿಕೆಗಳ ಆಚರಣೆ ಈಗಲೂ ಜೀವಂತವಾಗಿವೆ. ನಮ್ಮನ್ನಾಳುವ ಸರ್ಕಾರಗಳ ಜನಪ್ರತಿನಿಧಿಗಳೇ ಮೂಢನಂಬಿಕೆಗಳನ್ನು ಆಚರಿಸುತ್ತಿರುವುದನ್ನು ಕಾಣುತ್ತೇವೆ. ಇಂತಹುಗಳನ್ನು ತೊಲಗಿಸಲು ಶರಣರ ವಚನಗಳು ದಾರಿದೀಪವಾಗಿವೆ. ಕಾಗೆ ಕೂತು ಹೊಲಸು ಮಾಡುವ ದೇವಸ್ಥಾನದ ಕಲಶ ಸ್ಥಾವರ ರೂಪಿಯಾದುದು. ಅದು ಶಾಶ್ವತವಲ್ಲ ಜಂಗಮ ಸ್ವರೂಪಿಯಾದ ಶವನು ಮೆಟ್ಟುವ ಚಮವಮಾವುಗೆಯಾದರೆ ಜೀವನ ಸಾರ್ಥಕ ಎಂದು ಬಸವಣ್ಣನವರು ಹೇಳಿ 800 ವರ್ಷಗಳಾದರೂ ಇನ್ನೂ ನಾವು ಗುಡಿ–ಗೋಪುರಗಳನ್ನು, ಕಟ್ಟಿಸುವುದನ್ನು ದಾನ–ದತ್ತಿ ನೀಡುತ್ತಿರುವುದನ್ನು ನಿಲ್ಲಸಿಲ್ಲ. ದೇವಸ್ಥಾನಗಳಿಗೆ ಹೋಗುವುದನ್ನು ಬಿಟ್ಟಿಲ್ಲ ಮನುಷ್ಯ–ಜಂಗಮ ದೇವಸ್ಥಾನ–ಸ್ಥಾವರ ಸಂಬಂಧದ ಪರಿಕಲ್ಪನೆ. ನಾವೆಲ್ಲಾ ಹೇಗೆ ಆಗಿಬಿಟ್ಟದ್ದೇವಿ ಅಂದ್ರೆ ಬಸವಣ್ಣವನರು ಹೇಳುವ ಸಮಜ ಸುಧಾರಣೆಬೇಕು ಎಂದು ಹೇಳಲಿಕ್ಕಷ್ಟೆ ಓದಿಕೊಳ್ಳುತ್ತಿದ್ದೇವೆ ಏನೋ ಎಂಬ ಸಂಶಯ ನನಗೆ—
ಅವರ ವೈಚಾರಿಕ ನಿಲುವು, ಮೂಢನಂಬಿಕೆಗಳನ್ನು ಖಂಡಿಸಿದ್ದಾರೆ. ಆದರೆ ಇನ್ನೂ ನಾವು ಬಾಯಿ ಮಾತಿನಲ್ಲಿಯೇ ಉಳಿಸಿಕೊಂಡು ಬಿಟ್ಟಿದ್ದೇವೆ. ಬಸವಣ್ಣವನರ ಈ ವಚನದಲ್ಲಿ ದೇವಸ್ಥಾನ, ಕಲಶ ಶ್ರೇಷ್ಠ ಎಂಬ ಪರಕಲ್ಪನೆಯಾಗಿ ಕಾಗೆ–ಹೊಲಸು ಎಂಬುದು ಕನಿಷ್ಠವಾಗಿ ಸಾಮಾನ್ಯವಾಗಿ ಕಂಡುಬರುತ್ತದೆ. ಸಮಾಜವು ಕಲ್ಪಸಿಕೊಂಡ ಈ ಪರಿಕಲ್ಪನೆಗಳು ಶರಣರಲ್ಲಿ ವಿರುದ್ಧವಾಗಿ ಮಾರ್ಪಾಟಾಗುತ್ತವೆ. ಸ್ಥಾವರವಾಗಿರುವ ದೇವಸ್ಥಾನ–ಕಲಶಗಳು ಹೊಲಸಾಗಿ ಅಳಿಯುತ್ತವೆ. ಜಂಗಮರೂಪಿಯಾದ ಶರಣ ಚಮ್ಮಾವುಗೆ ಚಲಿಸಿ–ಚಲಿಸಿ ಉಳಿಯುತ್ತದೆ. ಇಲ್ಲಿ ಕಾಣಿಸಿಕೊಳ್ಳುವ ಕಾಗೆ ಹೊಲಸು ಮಾಡುವ ಮೂಲಕ ಕಲಶದ ಅಸ್ತಿತ್ವವನ್ನು ತಿರಸ್ಕರಿಸುತ್ತದೆ.

**ಶರಣರ ವಚನದಲ್ಲಿ 'ಕಾಗೆ' ಎರಡು ರೀತಿಯಲ್ಲಿ ನೋಡಲು ಸಾಧ್ಯವಿದೆ.**

1. ಒಳ್ಳೆಯ/ಕೆಟ್ಟ ಗುಣದ ಕಾಗೆ: ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು. ಮನುಷ್ಯ ಸಂಘಜೀವಿ, ಸಾಮೂಹಿಕ ಭೋಜನದಲ್ಲಿ ಸಂತೃಪ್ತಿಯಿದೆ, ಸಂತೋಷವಿದೆ.

ತನ್ನಲ್ಲಿರುವ ಸಂಪತ್ತನ್ನು/ಆಹಾರವನ್ನು ಹಂಚಿ ತಿನ್ನುವುದೇ ಪ್ರತಿಯೊಂದು ಜೀವಿಯ ಸದ್ಗುಣ/ಲಕ್ಷಣ

2. ವ್ಯಕ್ತಿ ಸತ್ತಾಗ ಎಡೆ ನೀಡುವ ಪದ್ಧತಿ: ಕಾಗೆಯು ಸತ್ತ ವ್ಯಕ್ತಿಗೆ ಸದ್ಗತಿಯನ್ನು ನೀಡುವ ದೈವ ಪಕ್ಷಿ. ಅದು ಜನ ನೀಡುವ ಎಡೆಯನ್ನು ಸೇವಿಸಿದರೆ ಒಳ್ಳೆಯದು ಇಲ್ಲವದರೆ ಕೆಟ್ಟದ್ದು ಎಂಬ ನಂಬಿಕೆ
3. ಅನ್ನವನ್ನು ಹಂಚಿ, ತಿನ್ನದ ವ್ಯಕ್ತಿಗೆ 'ಎಂಜಲು ಕೈಯಲ್ಲಿ ಕಾಗೆ ಹೊಡೆಯೋನು ಎಂಬ ಬೈಗುಳ ಸಾಮಾನ್ಯವಾಗಿದೆ.
4. ಕಾಗೆ ಶನಿದೇವನ ವಾಹನ ಎಂಬ ಪೂಜ್ಯ ಭಾವನೆ ಸಾವಿನ ಸುದ್ದಿ
5. ಕಾಗೆಗಳು ಒಟ್ಟಾಗಿ ಚೀರಾಟ ಮಾಡಿದರೆ ಕೆಟ್ಟ-ಸುದ್ದಿ/ಎಂಬ ನಂಬಿಕೆ
6. ವ್ಯಕ್ತಿ ಸದಾ ಮಾತನಾಡುತ್ತಿದ್ದರೆ ಯಾಕೆ ನೀನು ತರಹ ವಟ-ವಟ ಅಂತೀಯಾ-ಎಂಬ ಮಾತು.
7. ಕಾಗೆ ಮುಟ್ಟಿದ್ರೆ ದೇವಸ್ಥಾನಕ್ಕೆ ಹೋಗಿ ಎಣ್ಣೆ ಬತ್ತಿ ನೀಡುವ ಪದ್ಧತಿ
8. ಮನುಷ್ಯ ಕಪ್ಪು ಇದ್ದರೆ ಒಳ್ಳೆ ಕಾಗೆ ತರಹ ಇದ್ದಾನೆ ಎಂಬ ಭಾವನೆ

ರಾಷ್ಟ್ರಕವಿ ಕುವೆಂಪು 'ನಿರಂಕುಶಮತಿಯಿಂದ ಆತ್ಮಶ್ರೀಯಲ್ಲಿ "ಈ ದೇಹ ದೇವರ ಗುಡಿ, ಅದನ್ನು ಶುಚಿಯಾಗಿಡುವುದು ಪ್ರತಿಯೊಬ್ಬ ಮಾನವನ ಕರ್ತವ್ಯ. ಕೊಳಕಾದ ಗುಡಿಯಲ್ಲಿ ಈಶ್ವರನು ಪ್ರಕಾಶವಾಗನು ದೆವ್ವ ದೇವರುಗಳಿಗೆ ಕಟ್ಟುವ ಕಾಣಿಕೆಯ ಹಣವನ್ನು ಎಣ್ಣೆ-ಸೀಗೆ, ಸಾಮಾನುಗಳಿಗೆ ಉಪಯೋಗಿಸಿದರೆ ಆತನು ನಮಗೆ ಇನ್ನೂ ಹೆಚ್ಚಾಗಿ ಒಲಿಯುತ್ತಾನೆ. ಏಕೆಂದರೆ ಆತನಿಗೆ ಬೇಕಾದುದು ನಮ್ಮ ಹೃದಯದ ಸರಳ ಭಕ್ತಿ; ಆದರೆ ನಮ್ಮ ಕಬ್ಬಿಣದ ಪಿತಾರಿಯ ದುಡ್ಡಲ್ಲ. ಆದ್ದರಿಂದ ಇಂದಿನ ಅಗತ್ಯತೆ ಮತ್ತು ಪರಿಸ್ಥಿತಿ ವಚನಗಳು ದಾರಿದೀಪವಾಗಿವೆ. ನಂಬಿಕೆ-ಮೂಢನಂಬಿಕೆ ನಡುವಿನ ಮಾನವೀಯತೆಯ ಚಿಂತನಶೀಲ ಗುಣ ಬೆಳಸಿ ಅವುಗಳಿಗೆ ಕಾರ್ಯ ಕಾರಣ ಸಂಬಂಧವನ್ನು ಹುಡುಕಿ ಪರಿಹಾರವನ್ನು ವಚನಗಳು ಒದಗಿಸಿದೆ. ವಚನ ಜ್ಞಾನವು ವ್ಯಕ್ತಿಯಲ್ಲಿರುವ ಅಜ್ಞಾನವನ್ನು ಸುಟ್ಟುಹಾಕಿ ಅವನನ್ನು ವಿಶ್ವಮಾನವನನ್ನಾಗಿಸುವ ಶಕ್ತಿ ನೀಡುತ್ತವೆ.

ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು
ಲಿಂಗ ಪೂಜೆಯಾದಡೂ ಮರೆಯಬೇಕು
ಜಂಗಮ ಮುಂದಿದ್ದರೂ ಹಂಗು ಹರೆಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು---
ಆಯ್ದಕ್ಕಿ ಲಕ್ಕಮ್ಮ.

'ಉದ್ಯೋಗ ಪುರುಷ ಲಕ್ಷಣಂ' ಎಂಬ ಸನಾತನ ಮಾತಿಗೆ 'ಉದ್ಯೋಗಕ್ಕೆ ಕೇವಲ ಪುರುಷನು ಮಾತ್ರವಲ್ಲ ಸ್ತ್ರೀಯೂ ಸಮಾನಳು ಎಂದು ವಚನ ಸಾಹಿತ್ಯವು ಸಾರಿದೆ. ಈಗಾಗಲೇ ಸ್ಥಾಪಿತವಾಗಿದ್ದ ಪುರುಷ ಪ್ರಧಾನ ಸಂಸ್ಕೃತಿಯನ್ನು ತಿರಸ್ಕರಿಸಿದೆ. ಪ್ರಾಚೀನ ಪರಂಪರೆಯ ತಾತ್ವಿಕ ವಿಚಾರಗಳನ್ನು ಪ್ರಶ್ನಿಸುತ್ತಲೇ ವಚನ ಸಾಹಿತ್ಯ ಮುಖಮುಖಿಯಾಗಿ ಜೀವಪರ ನಿಲುವನ್ನು ಪ್ರತಿಪಾದಿಸಿತು. ಕಾಯಕದ ಮೂಲಕ ದೇಹವನ್ನು ದಂಡಿಸಿ ಸಂಪಾದಿಸಿದ್ದನ್ನು ಅವಶ್ಯಕತೆ ಇರುವಷ್ಟು ಇಟ್ಟು ಕೊಂಡು ಉಳಿದದ್ದನ್ನು ದಾಸೋಹಕ್ಕಾಗಿ ನೀಡಬೇಕೆಂಬ ಸಂವಿಧಾನವನ್ನು ಜಾರಿಗೊಳಿಸಿತು. 12ನೇ ಶತಮಾನದಲ್ಲಿ ಸಮಾಜಕ್ಕೆ ಕಾಯಕ ಸಿದ್ಧಾಂತವು ಆರ್ಥಿಕ ಚೇತರಿಕೆಯನ್ನು ನೀಡಿತು. ಶ್ರಮಣಧಾರೆ ಸಂಸ್ಕೃತಿಯ ಬೀಜವಾದ ಕಾಯಕದ ಪ್ರಜ್ಞೆಗೆ ಹೆಚ್ಚು ಒತ್ತು ನೀಡಿತು. ಕಾಯಕದಲ್ಲಿ ಭಗವಂತನನ್ನು ಕಾಣಬೇಕು. ಕಾಯಕ ತತ್ವ ಮತ್ತು ದಾಸೋಹ ತತ್ವ ಶರಣರಲ್ಲಿ ಬಹು ಮುಖ್ಯವಾಗಿದೆ. ಅಂತರಂಗ-ಬಹಿರಂಗ ಶುದ್ಧಿಯಿಂದ ಜೀವನ ನಡೆಸಬೇಕು. ಭಕ್ತನ ಬಿಟ್ಟು ದೇವರಿಲ್ಲ; ದೇವರ ಬಿಟ್ಟು ಭಕ್ತನಿಲ್ಲ. ಸೋಮಾರಿತನವನ್ನು ಹೋಗಲಾಡಿಸಲು ಕಾಯಕ ತತ್ವ ಹಸಿದವನಿಗೆ ಅನ್ನವನ್ನು ಹಂಚಿ ತಿನ್ನುವ ದಾಸೋಹತತ್ವ. ಇಂತಹ ಮೌಲ್ಯಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡವಳು ಶರಣೆ ಆಯ್ದಕ್ಕಿ ಲಕ್ಕಮ್ಮ. ಭಕ್ತಿಯೊಂದೇ ಭಗವಂತನನ್ನು ಆರಾಧಿಸಲು ಇರುವ ಸರಳ ಮಾರ್ಗ, ಆದು ಕಾಯಕದೊಳಗೂ ಕಾಣಬಹುದು ಎಂಬ ಬಲವಾದ ನಂಬಿಕೆ ಲಕ್ಕಮ್ಮಳದು. ಭಕ್ತಿಯು ಶ್ರದ್ಧೆಯಿಂದ ಕೂಡಿರಬೇಕು. ಶ್ರದ್ಧೆಯು ಪ್ರಾಮಾಣಿಕವಾಗಿರಬೇಕು. ಕಾಯಕವು ಎಲ್ಲಾ ಪೂಜೆಗಳಿಗಿಂತಲೂ ಶ್ರೇಷ್ಠವಾದುದು. ಗುರು-ಲಿಂಗ-ಜಂಗಮಕ್ಕಿಂತಲೂ ಕಾಯಕ ಶ್ರೇಷ್ಠ ಇದನ್ನು ನಿಷ್ಠೆ, ಪ್ರಾಮಾಣಿಕತೆಯಿಂದ ಮಾಡಬೇಕು.

ಕಾಯಕ-ಎಂಬುದು ದೇಹವನ್ನೂ ದಂಡಿಸುವುದು ಎಂದರ್ಥವಿರಬಹುದು; ದೇಹವು ನಿಷ್ಠೆ, ಪ್ರಾಮಾಣಿಕತೆಯಿಂದ ಕಾಯಕ ಮಾಡಿದಾಗ ಆರೋಗ್ಯವು ವೃದ್ಧಿಸುತ್ತದೆ. ಆರ್ಥಿಕತೆಯೂ ವೃದ್ಧಿಸಿ ಬಡತನವೂ ನಿವಾರಣೆಯಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಆದಾಯ ಹೆಚ್ಚಿ ಸುಖೀ ಕುಟುಂಬ, ಸಮಾಜ ನಿರ್ಮಾಣವಾಗುತ್ತದೆ. ಇಂತಹ ಬಹುದೊಡ್ಡ ಕಾಯಕ ಚಳುವಳಿಯನ್ನು ವಚನ ಸಾಹಿತ್ಯವು ಮಾಡಿತು. ಇದರಿಂದ ದೇವರು-ಧರ್ಮ, ಆರಾಧನೆ ಆಚರಣೆಗಳು ಸರಳಗೊಂಡವು. ದೇವರು ದೇವಾಸ್ಥಾನದಿಂದ ದೇಹಕ್ಕೆ ವರ್ಗಾವಣೆಗೊಂಡಿದ್ದು, ಸಾಮಾಜಿಕ ಬದಲಾವಣೆಯಲ್ಲಿ ಪ್ರಮುಖ ಪಾತ್ರವಹಿಸಿತು. ದೇವರು-ದೇವಸ್ಥಾನಗಳು ಪುರೋಹಿತನ ಕೈಗೆ ಸಿಕ್ಕು ಸಮಾಜದಲ್ಲಿ ಅಸಮಾನತೆಯನ್ನು ಸೃಷ್ಟಿಸಿತ್ತು. ಭಕ್ತಿ ಎನ್ನುವುದು ವೈಯಕ್ತಿಕ ಸ್ವಚ್ಛ ಮನಸ್ಸಿನ ಆರಾಧನೆಯಾಗಿದೆ. ಅದು ಯಾರೋ ಒಪ್ಪಲೋ ಅಥವಾ ತೋರಿಕೆಗಾಗಿಯೋ ಆಚರಿಸುವುದಲ್ಲ! ಕುರಿ-ಕೋಳಿ-ಮರಿಬೇಡ ಬರಿಯ ಪತ್ರೆಯಿಂದ ಪೂಜಿಸಿ ಕರೆದರೆ ಓ ಏನ್ನನೇ ಶಿವನು ಎಂದು ಶರಣರು ಪ್ರಶ್ನಿಸುತ್ತಾರೆ. ಭಕ್ತಿಯಿಲ್ಲದವನು ನಿಜವಾದ ಬಡವನು. ಎಷ್ಟೇ ಆಸ್ತಿ, ಅಂತಸ್ತು, ಐಶ್ವರ್ಯವಿದ್ದರೂ ಭಕ್ತಿಯಿಲ್ಲದ ಮೇಲೆ ವ್ಯರ್ಥ ಎಂಬುದು ಶರಣರ ನಂಬಿಕೆಯಾಗಿತ್ತು. ಭಕ್ತಿ ಭಂಡಾರಿ ಎನಿಸಿದ್ದ ಬಸವಣ್ಣನವರು-----

ಭಕ್ತಿಯಿಲ್ಲದ ಬಡವ ನಾನಯ್ಯ, ಕಕ್ಕಯ್ಯನ ಮನೆಯಲು ಬೇಡಿದೆ ಚನ್ನಯ್ಯನ ಮನೆಯಲು ಬೇಡಿದೆ ದಾಸಯ್ಯನ ಮನೆಯಲು ಬೇಡಿದೆ ಎಲ್ಲಾ ಪುರಾತನರು ನೆರೆದು ಭಕ್ತಿ ಭಿಕ್ಷೆಯನಿಕ್ಕದಡೆ ಎನ್ನ ಪಾತ್ರೆ ತುಂಬಿತ್ತು ಕೂಡಲ ಸಂಗಮದೇವ ಎಂಬ ಮಾತು ಸಾಮಾಜಿಕ ಬದುಕಿನಲ್ಲಿ ಕೆಳಸ್ಥರದ/ಕೆಳಜಾತಿಯ ವ್ಯಕ್ತಿ ತನ್ನ ಹಸಿವಿಗೆ ಅನ್ನವನ್ನೋ ಅಥವಾ ತೊಡಲು ವಸ್ತ್ರವನ್ನೋ ಬೇಡುವುದು ಸಹಜ ಕ್ರಿಯೆ. ಆದರೆ ಇಲ್ಲಿ ಬಸವಣ್ಣನವರು ಎಲ್ಲಿರಿಗೂ 'ಅಣ್ಣ' ಎನಿಸಿಕೊಂಡು, ಭಕ್ತಿ ಭಂಡಾರಿ ಎನಿಸಿಕೊಂಡು ತನ್ನನ್ನು ತಾನು ಭಿಕ್ಷುಕನ ಮಟ್ಟಕ್ಕೆ ಇಳಿದು ಬೇಡುವ ಪರಿ ಅಸಾಧಾರಣವಾದುದು. ಅದು ಶ್ರೇಷ್ಠವರ್ಗದಲ್ಲಿ ಜನಿಸಿದ ಒಬ್ಬ ವ್ಯಕ್ತಿ ಕೆಳಜಾತಿಯವರಾದ ಶರಣರಲ್ಲಿ ಬೇಡುವ ಕ್ರಿಯೆ ವಿಶಿಷ್ಠವಾದುದು.

ಶರಣರು ಸಮಾಜದಲ್ಲಿದ್ದ ಜಾತಿಯ ಅಸಮಾನತೆಯನ್ನು ತೊಲಗಿಸಲು ಇಂತಹ ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಲೋಕದ ದೋಷಗಳನ್ನು ತಮ್ಮ ಮೇಲೆ ಆರೋಪಿಸಿಕೊಂಡು ತಿದ್ದುವ ಪ್ರಯತ್ನ ಮಾಡಿದ್ದಾರೆ. ಶರಣರು ಇಲ್ಲಿ ಶ್ರೀಮಂತಿಕೆಯನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಸಮಾಜದಲ್ಲಿ ಸಂಪತ್ತು, ಅಧಿಕಾರವನ್ನು ಶ್ರೀಮಂತಿಕೆಯ ಮಾನವಾಗಿ ಬಳಸುತ್ತಿದ್ದರು. ಇದರಿಂದ ಉಂಟಾಗುವ ಅಸಮಾನತೆ ಬಡವ-ಶ್ರೀಮಂತ; ಭಿಕ್ಷುಕ-ದೊರೆ

ಇವುಗಳು ವೈರುಧ್ಯ ದಿಕ್ಕಿನಲ್ಲಿರುವಂತಹವು. ನಿಜವಾದ ಬಡವ ಭಕ್ತಿಯಲ್ಲಿ ಶ್ರೀಮಂತನಾಗಿದ್ದರೆ ನಿಜ ಜೀವನದಲ್ಲಿ ಶ್ರೀಮಂತ ಭಕ್ತಿಯಲ್ಲಿ ಬಡವನಾಗಿದ್ದಾನೆ.

ಇಲ್ಲಿ ಶ್ರೀಮಂತನಾಗಿರುವ ಬಸವಣ್ಣ ಭಕ್ತಿಯ ಹಸಿವಿನಿಂದ ನರಳುತ್ತಿರುವುದು ಬಡವನಾಗಿದ್ದು, ಕೀಳು ಜಾತಿಯಲ್ಲಿ ಹುಟ್ಟಿದರೂ ಭಕ್ತಿಯಲ್ಲಿ ಶ್ರೀಮಂತರಾದ ಚನ್ನಯ್ಯ, ಕಕ್ಕಯ್ಯ, ದಾಸಯ್ಯರವರನ್ನು ದೈನಾಸಿ ಬೇಡುವ ಕ್ರಿಯೆ ಅದ್ಭುತವಾಗಿದೆ. ಸಮಾಜದಲ್ಲಿ ಸಮಾನತೆ, ಸಹಕಾರ, ಮಾನವೀಯತೆ ಜೀವಪರ ಕಾಳಜಿಗಳನ್ನು ಆದರ್ಶಗಳನ್ನು ತಿಳಿ ಭಾಷೆಯಲ್ಲಿ ಪ್ರಯೋಗಿಸಿದ್ದು ಚಳುವಳಿ ರೂಪು ಪಡೆಯಿತು. ಇಂದಿನ ಪರಿಸ್ಥಿತಿಯಲ್ಲಿ ನಿಜವಾದ ಭಕ್ತ ಯಾರು ಎಂದು ಗುರ್ತಿಸುವುದೇ ಕಷ್ಟವಾಗಿದೆ. ಕಾರಣ ಅನಂತ–ಅನಂತ ತಪ್ಪುಗಳನ್ನು ಮಾಡಿ ವಾಮಮಾರ್ಗದ ಮೂಲಕ ಸಂಪತ್ತನ್ನು ಕ್ರೂಢೀಕರಿಸಿ ತನ್ನ ತಪ್ಪುಗಳನ್ನು ಮನ್ನಿಸು ದೇವರೆ–ನಿನಗೆ ಕುರಿ–ಕೋಳಿ, ಮರಿ ಕೊಡುವೆ, ದೇವಸ್ಥಾನ ನಿರ್ಮಿಸಿಕೊಡುವೆ, ಕಾಂಪೌಂಡ್ ಕಟ್ಟಿಸುವೆ ಒಡವೆ–ವಸ್ತ್ರಗಳನ್ನು ಕಾಣಕೆಯಾಗಿ ನೀಡುವೆ ಎಂದು ಹಂಬಲಿಸುವ ಜನರು ಹೆಚ್ಚಾಗಿದ್ದಾರೆ. ಇದಕ್ಕೆ ಶರಣರು ನಿಜವಾದ ಭಕ್ತಿಯನ್ನು ಪಾಲಿಸಬೇಕು ಎಂದು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಸಾರಿದ್ದಾರೆ.

**ಉಪಸಂಹಾರ:**

ಯುವಜನತೆಯ ಮೂಲಕ ನವ ಸಮಾಜವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ 12ನೇ ಶತಮಾನದ ಶರಣರ ವಚನಗಳು ಮಾದರಿಯಾಗಿವೆ. ಶರಣರ ನಡೆ–ನುಡಿ, ಆದರ್ಶಗಳು, ವಿಶಾಲ ಮನೋಭಾವ, ವಿಮರ್ಶಾತ್ಮಕ ಚಿಂತನೆಗಳನ್ನು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಾಗ ಉತ್ತಮವಾದ ಸಮಾಜವನ್ನು ನಿರ್ಮಿಸಬಹುದಾಗಿದೆ. ಸತ್ಯ–ಮಿಥ್ಯಗಳ ನಡುವಿನ ವ್ಯತ್ಯಾಸ, ಜಾತಿ, ಧರ್ಮಗಳ ಕುರಿತು ವಿಚಾರಗಳು ಹೀಗೆ ಹತ್ತು ಹಲವು ಸಮಾಜದ ಆಯಾಮಗಳನ್ನು ನಾವುಗಳು ಗುರುತಿಸಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. ವಚನ ಸಾಹಿತ್ಯವು ಎಂದೆಂದು ಅಜರಾಮರ ಶರಣರ ತತ್ವ ಮತ್ತು ಸಿದ್ಧಾಂತಗಳು ಸರಿದಾರಿಯನ್ನು ತೋರುವಲ್ಲಿ ಎಂದಿಗೂ ಹಸಿರಾಗಿರುತ್ತವೆ. ಶರಣರ ಭಕ್ತಿಯ ಸ್ವರೂಪವು ಸಾಮಾನ್ಯನಿಗು ನಿಲುಕುವಂತಾಗಿದೆ.

**ಆಧಾರ ಗ್ರಂಥಗಳು:**


1. ಉಮಾಪತಿ. ಎಸ್. ಶರಣ ಸಂಪದ, ಕ. ಸಾ. ಪ. ಬೆಂ. (2004).
2. ನಾರಾಯಣ. ಪಿ. ವಿ. ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ ವಸಂತ ಪ್ರಕಾಶನ. (2008).
3. ಮುಗುಳಿ ರಂ., ಶ್ರೀ. ಕನ್ನಡ ಸಾಹಿತ್ಯ ಚರಿತ್ರೆ, ಸಮಾಜ ಪುಸ್ತಕಾಲಯ, ಧಾರವಾಡ.
4. ಶ್ರೀನಿವಾಸ ಮೂರ್ತಿ. ಎಂ. ಆರ್. ವಚನ ಧರ್ಮಸಾರ, ಕ. ಸಾ. ಪ. ಬೆಂ. (2017).
5. ನೆಲ್ಲಿಕಟ್ಟೆ ಎಸ್. ಸಿದ್ದೇಶ್. ತನ್ನ ತಾನಅರಿದಡೆ, ಗೀತಾಂಜಲಿ ಪ್ರಕಾಶನ. (2018).
6. ಹೀರೆಮಠ್. ಬಿ. ಆರ್. ಸಂಕೀರ್ಣ ವಚನ ಸಂಪುಟಗಳು. ಕ.ಸಂ.ಇ. ಬೆಂ. (1993).